

ತಯಾರಕರ ಹೇಳಿಕೆ ನಿಜವೇ ಎಂದು ಪರೀಕ್ಷಿಸುವವರು ಯಾರೂ ಇರಲಿಲ್ಲ.

ಆದರೆ ಜೀವನ ಯಾವಾಗಲೂ ಅದೇ ತರಹ ಇರುವುದಿಲ್ಲ. ಬದುಕಿನ ದಿಕ್ಕು ಇದ್ದಕ್ಕಿದ್ದಂತೆಯೇ ಬದಲಾಗುವ ಶಕ್ತಿಗಳು ಅಲ್ಲಲ್ಲಿ ಮರೆಯಲ್ಲಿ ಕಾದಿರುತ್ತವೆ. ಸುನಿಲ್‌ನ ಬಾಳಲ್ಲೂ ನಡೆದುದು ಅದೇ. ಟೀವಿಯಲ್ಲಿ ನೋಡಲು ಪಂದ್ಯಗಳೇನೂ ಇರದೆ, ಬೇರೇನಾದರೂ ಮೋಜಿಗಾಗಿ ಪರದೆಯ ಮೇಲೆ ಅರಸುತ್ತಿರುವಾಗ, ಇಂಡಿಯನ್ ಚಾನೆಲ್ ಒಂದರಲ್ಲಿ ಕಲ್ಕತ್ತಾ ತೀರದಲ್ಲಿ ದಡಕ್ಕೆ ಬಂದು ಬಿದ್ದ ದುರ್ಗಾ ಮೂರ್ತಿಗಳ ಬಗ್ಗೆ ನಡೆದ ಕೋಲಾಹಲ ಕಾಣಿಸಿತು.

ವಿಸರ್ಜನೆಯ ನಂತರ ಇಳಿತದ ಪರಿಣಾಮವಾಗಿ ಮೂರ್ತಿಗಳೆಲ್ಲ ಹೊಟ್ಟೆ ಮೇಲಾಗಿ ದಡದ ಮೇಲೆ ರಾಶಿ ಬಿದ್ದಿದ್ದುವು. ಸ್ಥಳೀಯರ ಕಣ್ಣಿಗೆ ಬಿದ್ದ ಈ ಸಂಗತಿ ಕಾಳ್ಗಿಚ್ಚಿನಂತೆ ಹಬ್ಬ ತೊಡಗಿತು. ಹೀಗೆ ವಿಗ್ರಹಗಳು ಭಗ್ನವಾಗಿ ದಡ ಸೇರುವುದು ಅಪಶಕುನವೆಂದು ತಿಳಿಯಲಾಗುತ್ತಿತ್ತು. ಸಂಬಂಧಿಸಿದ ಅಧಿಕಾರಿಗಳು ಮೋಟರ್‌ಬೋಟ್‌ಗಳನ್ನು ಬಾಡಿಗೆಗೆ ನೇಮಿಸಿಕೊಂಡು ಅವುಗಳ ಮೇಲೆ ಈ ಮೂರ್ತಿಗಳನ್ನು ಹೇರಿಕೊಂಡು ಆಳ ನೀರಿಗೊಯ್ದು ಮುಳುಗಿಸಿ ಬರುತ್ತಿದ್ದರು. ಸುನಿಲ್ ಒಮ್ಮೆಲೆ ನೆಟ್ಟಗಾಗಿ ಬಿಟ್ಟನು! ಬೇಸ್ಮೆಂಟ್‌ನ ಬಾತ್‌ರೂಮಿನಲ್ಲಿ ಬಾಲ್ದಿಯಲ್ಲಿದ್ದ ತನ್ನ ಗಣೇಶನ ನೆನಪಾಯ್ತು. ಎರಡೆರಡು ಮೆಟ್ಟಲಂತೆ ಹಾರುತ್ತಾ ಅವನು ಕೆಳಗೆ ಬಂದನು. ಡಾನ್ಸ್ ಫ್ಲೋರ್ ಆಗಿಯೂ ಉಪಯೋಗಿಸಲ್ಪಡುತ್ತಿದ್ದ ಅಲ್ಲಿನ ನೆಲದಲ್ಲಿ ಜಾರುತ್ತಾ, ಏದುಸಿರು ಬಿಡುತ್ತಾ ಬಾತ್‌ರೂಮ್ ಬಾಗಿಲನ್ನು ಹಾರೊಡೆದು ಒಳಬಂದು ದಿಟ್ಟಿಸಿದ. ಆವೆಮಣ್ಣು, ಬಣ್ಣ, ನೀರಿನ ಮಿಶ್ರಣವನ್ನು ಅವನು ಎದುರು ನೋಡಿದ್ದ. ಆದರೆ ಕಂಡ ದೃಶ್ಯ ಅವನನ್ನು ದಿಕ್ಕೆಡಿಸಿತು. ಆ ದೇವನು ಅಂದು ಕಂಡಂತೆಯೇ ಪಕ್ಕಕ್ಕೊರಗಿ ಕುಳಿತಿದ್ದ! ನೀರೆಲ್ಲ ಖಾಲಿಯಾಗಿತ್ತು. ಒಂದಿಷ್ಟು ಬಣ್ಣ ಕೆಟ್ಟುದು ಬಿಟ್ಟರೆ, ಮೂರ್ತಿ ಇದ್ದಂತೆಯೇ ಇತ್ತು. ಅವನ ತಲೆಯಲ್ಲಿ ಯೋಚನೆಗಳು ಸುಳಿದುವು. ನೀರೆಲ್ಲ ಏನಾಯ್ತು? ಈ ಶೀತಲ ಮಿನಿಸೋಟಾದಲ್ಲಿ, ಅದೂ ಈ ಚಳಿಗಾಲದಲ್ಲಿ ಮನೆಯ ಅಗ್ಗಿಷ್ಟಿಕೆಗಳೆಲ್ಲ ಉರಿಯುತ್ತಿದ್ದು ಸುತ್ತುವ ಒಣಗಾಳಿ ಬಚ್ಚಲು ಮನೆಯನ್ನು ಸಾಕಷ್ಟು ಬೆಚ್ಚಗಾಗಿಸುತ್ತಿತ್ತು. ಅದೇ ಆ ಬಾಲ್ದಿಯ ನೀರನ್ನೆಲ್ಲ ಆವಿ ಮಾಡಿ, ಈ ದೇವನನ್ನು ಹಾಗೇ ಬಾಯಾರಿದಂತಿರುವಂತೆ ಮಾಡಿತ್ತು. ವಿಗ್ರಹ ತಯಾರಕ ಸಾರಿ ಹೇಳಿದ್ದೆಲ್ಲ ಸುಳ್ಳೆಂಬ ವಿಚಾರ ಅವನ ತಲೆಯಲ್ಲಿ ಸುಳಿಯಿತು. ಸ್ವದೇಶೀಯರ ಬಗ್ಗೆ ಬೈಗುಳದ ಮಾತು ಅವನಿಂದ ಹೊರಟಿತು.

ಅವರನ್ನು ಎಂದಾದರೂ ನಂಬಬಹುದೇ?

ಅವನು ಹತಾಶನಾಗಿ ಕುಸಿದು ಕುಳಿತ. ಮಾಡುವುದೇನೆಂದು ಅವನು ಅರಿತಿರಲಿಲ್ಲ.

ವಿಘ್ನವಿನಾಶಕನನ್ನು ಅವನು ಬೇಡಿಕೊಂಡ. ಪರಿಹಾರಕ್ಕಾಗಿ ಪ್ರಾರ್ಥನೆಯದು! ಆಗಲೇ ಬೇಕಿತ್ತು. ಮನುಷ್ಯರಿಂದಾಗದ್ದು ಆ ದೇವನಿಂದ ಮಾತ್ರ ಸಾಧ್ಯ! ವಿಸರ್ಜನೆಗಾಗಿಯೇ ನಿರ್ಮಿಸಿದ ಕೃತಕ ಸರೋವರಕ್ಕೆ ಅವರು ಗಣೇಶನನ್ನು ಒಯ್ಯದಿರಲು ಕಾರಣವಿತ್ತು, ಅದಕ್ಕಾಗಿ ಮುಜುಗರ ಹುಟ್ಟಿಸುವಂತೆ ಅನುಮತಿಗಾಗಿ ಯಚ್ನಿಸಬೇಕಿತ್ತು; ಪ್ರಶ್ನಿಸುವ ದೃಷ್ಟಿಗಳಿಂದ ತಪ್ಪಿಸಿ ಕೊಳ್ಳಬೇಕಿತ್ತು; ಹಾಗೂ ಮಧ್ಯಮವರ್ಗೀಯ, ಶಿಕ್ಷಿತ, ಸೆಕ್ಯುಲರ್ ಇಂಡಿಯನ್ಸ್ ಇಂತಹ ಕೆಲಸಗಳಲ್ಲಿ